**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ –೭ ಪಿ.ಡಬ್ಲ್ಯೂ -೪

| | | |
|---|---|---|
| ಹೆಸರು | ಃ | ಶಾಂತಪ್ಪ |
| ತಂದೆ | | ಸಿದ್ರಾಮಪ್ಪ |
| ವಯಸ್ಸು | ಃ | ೪೨ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ೧೯.೦೫.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-೧ ಹಾಗೂ ಚಾಸಾ-೬ ರವರ ಪರಿಚಯ ಇರುತ್ತದೆ. ಮೃತ ಶ್ರೀಶೈಲ ಪರಿಚಯ ಇರುತ್ತದೆ. ನಾನು ಕಡಗಂಚಿ ಪಾಟಿ ಹತ್ತಿರ ಹೊಗುತ್ತಿದ್ದಾಗ ಕೊರಳ್ಳಿ ಮಡ್ಡಿ ಹತ್ತಿರ ಪಂಚನಾಮೆ ಮಾಡಿದರು. ಪಂಚನಾಮೆ ಮಾಡಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ಈಗ ನಿಪಿ-೧೧ ತೋರಿಸಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-೧೧(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ:೦೩.೦೫.೨೦೧೭ ರಂದು ಸಂಜೆ ೪.೩೦ ರಿಂದ ೫.೩೦ ರ ಸಮಯದಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಸಮಕ್ಷಮ ಎರಡು ವಾಹನಗಳು ಕೆಎ-೩೨ ಸಿ-೬೪೪೮ ಹಾಗೂ ಕೆಎ-೩೨ ಇಬಿ-೩೨೬೮ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳವನ್ನು ಚಾಸಾ-೧ ರವರು ತೋರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಎಸ.ಎಸ.ಸಿ. ವಕೀಲರಿಂದ**

ನಾನು ಶಾಂತಪ್ಪ ತಂದೆ ಸಿದ್ರಾಮಪ್ಪ ನರೋಣಿ ಅಲ್ಲ ಎಂದರೆ ಸರಿ. ನಾನು ಶಾಂತಪ್ಪ ತಂದೆ ಸಿದ್ರಾಮಪ್ಪ ಸಾವಳೇಶ್ವರ ಎಂದು ಹೇಳುತ್ತಾರೆ. ನನಗೆ ಮತ್ತೊಂದು ಅಡ್ಡ ಹೆಸರು ನರೋಣಿ ಎಂದು ಇರುವುದಿಲ್ಲ.

ಪಂಚನಾಮೆಯನ್ನು ಕಡಗಂಚಿ ಪಾಟಿ ಹತ್ತಿರ ಮಾಡಿರುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ 10 ರಿಂದ 15 ಜನ ಇದ್ದರು. ಚಾಸಾ-1, 6, 11, ರವರು, ಮಿಕ್ಕಿದವರು ಹೆಸರು ನನಗೆ ನೆನಪಿರುವುದಿಲ್ಲ. ಕಡಗಂಚಿ ಪಾಟಿ ಹತ್ತಿರ ವಾಹನಗಳನ್ನು ಜಪ್ತಿಪಡಿಸಿಕೊಂಡು ಪೋಲಿಸ ಠಾಣೆಗೆ ತೆಗೆದುಕೊಂಡು ಹೊದರು. ನನಗೆ ಪಂಚರಾಗಲು ಚಾಸಾ-1 ರವರು ಕರೆದಕಾರಣ ಹೋಗಿರುತ್ತೇನೆ. ನಾನು ಹಾಗೂ ಚಾಸಾ-1 ರವರು ಬಿಗರು ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಅಕ್ಕ-ಪಕ್ಕದ ಮನೆಯವರು ಎಂದು ಹೇಳುತ್ತಾರೆ. ನಾನು ಹಾಗೂ ಚಾಸಾ-1 ರವರು ಸ್ನೇಹಿತರು ಎಂದರೆ ಸರಿ. ನಾನು ಇಂದು ಚಾಸಾ-1 ರವರೊಂದಿಗೆ ಬಂದಿರುತ್ತೇನೆ ಎಂದರೆ ಸರಿ ಅಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಪೋಲಿಸರು ಪಂಚನಾಮೆಯನ್ನು ಓದಿ ಹೇಳಿರುವುದಿಲ್ಲ ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ದಿಃ03.05.2017 ರಂದು ಸಂಜೆ 4.30 ರಿಂದ 5.30 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-1 ರವರು ಅಲ್ಲಿ ಉಪಸ್ಥಿತರಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.